ತಾವು ಕೊಡುವಂತಹ ಸಲಹೆಗಳನ್ನು ನಾನು ಸ್ವೀಕಾರ ಮಾಡುತ್ತೇನೆ. ಅವಧಿಯನ್ನು ವಿಸ್ತರಣೆ ಮಾಡುವ ಬಗ್ಗೆ ಪೂರ್ಣವಾಗಿ ಚರ್ಚೆಯಾದ ಮೇಲೆ ನಿರ್ಣಯ ಮಾಡುತ್ತೇವೆ. ಅವರು ವಿವರಗಳನ್ನು ಕೇಳಿದ್ದಾರೆ, ಅದು ಸಧ್ಯದಲ್ಲಿ ನನ್ನಲ್ಲಿಲ್ಲ. ಈ ಹಿಂದೆ ಒಂದು ಸಾರಿ ಈ ಸದನದಲ್ಲೇ ಆ ವಿವರಗಳನ್ನು ಕೊಟ್ಟಿದ್ದೇನೆ. ಆದರೂ ಆ ವಿವರಗಳನ್ನು ತರಿಸಿಕೊಡು ಮಾನ್ಯ ಸದಸ್ಯರಿಗೆ ಅದನ್ನು ಒದಗಿಸಿಕೊಡುತ್ತೇನೆ.

ಪ್ರಶ್ನೆ ನಂ. ೫೫೪೪ (೧೬೭೪) — ಸದಸ್ಯರು ಗೈರು ಹಾಜರಿ.

ಪ್ರಶ್ನೆ ನಂ. ೫೫೫೫ (೧೪೭೭) — ಸದಸ್ಯರು ಗೈರು ಹಾಜರಿ.

ಪ್ರಶ್ನೆ ನಂ. ೫೫೬೬ (೧೬೩೪)

ಶ್ರೀ ಟಿ. ಬಿ. ಜಾಳಿಕಾಯಿ.— ಲಕ್ಕೇಶ್ವರದಲ್ಲಿರುವ ನೂಲಿನ ಗಿರಣಿಯಲ್ಲಿ ೩ ವರ್ಷಗಳ ಹಿಂದೆ ಅಲ್ಲಿಯ ಆಡಳಿತ ಮಂಡಳಿಯವರು ಸರ್ವ ಸದಸ್ಯರ ಸಭೆಗೊಸ್ಕರ ೩೫,೬೦೩ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಕಾನೂನಿಗೆ ವಿರೋಧವಾದುದು. ಇದನ್ನು ಮಾನ್ಯ ಸಹಕಾರ ಮಂತ್ರಿಗಳ ಗಮನಕ್ಕೆ ತಂದಾಗ ಅವರು ಏಪ್ರಿಲ್ ತಿಂಗಳಲ್ಲಿ ನಮ್ಮಲ್ಲಿಗೆ ಭೇಟಿ ನೀಡಿದಾಗ ಆ ವಿಚಾರವನ್ನು ಅವರ ಗಮನಕ್ಕೆ ತಂದಾಗ ಅದರ ಬಗ್ಗೆ ವಿಚಾರಣೆ ಮಾಡಿ ಅದನ್ನು ಸೂಪರೆಸೀಡ್ ಮಾಡುತೇನೆಂದು ಹೇಳಿದ್ದರು. ಇದನ್ನು ವಿಚಾರಣೆ ಮಾಡುವ ಸಲುವಾಗಿ ಜಾಯಿಂಟ್ ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್ ಇನ್ನು ತನಿಖಾಧಿಕಾರಿಗಳನ್ನಾಗಿ ನೇಮಿಸಂತ್ತೇನೆಂದೂ ಕೂಡ ನನಗೆ ಆಶ್ವಾಸನೆ ಕೊಟ್ಟಿದ್ದರು. ಆದರೆ ಈ ವರೆವಿಗೂ ಯಾವುದೇ ಕ್ರಮವನ್ನು ಅವರು ತೆಗೆದುಕೊಂಡಿಲ್ಲ. ಅಲ್ಲಿ ಆಗಿರುವಂತಹ ಅನ್ಯಾಯವನ್ನು ಪುನಃ ಪ್ರಶ್ನೆಯ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಈಗಲಾದರೂ ಅವರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೀರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ನಾನು ಅದನ್ನು ಸೂಪರ್‌ಸೀಡ್ ಮಾಡುತ್ತೇನೆಂದು ಹೇಳಿಲ್ಲ. ಅಲ್ಲಿ ಜನರಲ್ ಬಾಡಿ ಮೀಟಿಂಗ್‌ಗೋಸ್ಕರ ೩೫,೬೦೩ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದನ್ನು ನಾವು ಅಪ್ರೂವ್‌ಮಾಡಿಲ್ಲ. ಜನರಲ್‌ಬಾಡಿ ಮೀಟಿಂಗ್‌ಗೋಸ್ಕರ ಅವರು ನಿಯಮಾನುಸಾರ ಖರ್ಚು ಮಾಡಬೇಕಾಗಿರುವುದು ೧೧,೦೩೬-೧೫ ರೂಪಾಯಿಗಳು. ಇನ್ನುಳಿದ ಹಣವನ್ನು ಅವರಿಂದ ಸರ್‌ಚಾರ್ಜ್ ರೀತಿ ವಸೂಲು ಮಾಡಬೇಕಾಗುತ್ತದೆಂದು ಅವರಿಗೆ ನೋಟೀಸ್ ಕೊಟ್ಟಿದ್ದೇವೆ. ಅದನ್ನು ಸೂಪರ್‌ಸೀಡ್ ಮಾಡುವುದಕ್ಕೆ ಬಲವಾದ ನಿದರ್ಶನಗಳು ನನ್ನ ಗಮನಕ್ಕೆ ಬಂದಿಲ್ಲ. ಅಂತಹದ್ದೇನಾದರೂ ಇದ್ದರೆ, ಮಾನ್ಯ ಸದಸ್ಯರು ನನಗೆ ನಿರ್ದಿಷ್ಟವಾಗಿ ಬರೆದು ಕಳುಹಿಸಿದರೆ, ಜೆ. ಆರ್. ಸಿ. ಎಸ್. ಅವರನ್ನು ಅಲ್ಲಿಗೆ ಕಳುಹಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಟಿ. ಬಿ. ಜಾಳಿಕಾಯಿ.— ನನಗೆ ಮೊದಲು ಅದನ್ನು ಸೂಪರ್‌ನೀಡ್ ಮಾಡುತ್ತೇನೆಂದು ಹೇಳಿದಂತಹ ಸಚಿವರು ಇಂದು ಆ ರೀತಿ ಹೇಳಿಲ್ಲವೆಂದು ಹೇಳುತ್ತಿದ್ದಾರೆ. ಅವರ ಬಗ್ಗೆ ಕ್ರಮ ಕೈಗೊಳ್ಳುತ್ತಾರೋ ಅಥವಾ ಇಲ್ಲವೋ ಅದನ್ನು ತಿಳಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಜನರಲ್ ಬಾಡಿ ಮೀಟಿಂಗ್‌ಗೋಸ್ಕರ ೩೫, ೬೦೩ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದು ಕಾನೂನಿಗೆ ವಿರೋಧವಾದುದು. ಕಾನೂನಿಗೆ ವಿರೋಧವಾಗಿ ಖರ್ಚು ಮಾಡಿದ್ದಾರೆಂದು ನಾನು ಹೇಳಿದ್ದೇನೆ. ಕಾನೂನು ಪ್ರಕಾರ ೧೧,೩೩೬ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಇನ್ನುಳಿದ ೨೪,೨೭೯ ರೂಪಾಯಿಗಳನ್ನು ಅವರಿಂದ ಸರ್‌ಚಾರ್ಜ್ ರೂಪದಲ್ಲಿ ವಸೂಲಿ ಮಾಡಬೇಕಾಗುತ್ತದೆಂದು ನೋಟೀಸ್ ಕೊಟ್ಟಿದ್ದೇವೆ. ಇಂತಹ ಸಣ್ಣ ವಿಷಯಂ ಕ್ಕೋಸ್ಕರ ಸೂಪರ್‌ನೀಡ್ ಮಾಡುವುದಕ್ಕೆ ಬರುವುದಿಲ್ಲ. ಹೆಚ್ಚಿನ ಮಾಹಿತಿ ಇದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಮುಂದೆ ಕ್ರಮ ಕೈಗೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.— ಅದರಲ್ಲಿ ೩ ಕೋಟಿ ೩೩ ಲಕ್ಷ ರೂಪಾಯಿ ಹಣ ತೊಡಗಿದೆ. ಸಾರ್ವಜನಿಕರಿಂದ ೫೦ ಲಕ್ಷ ಷೇರು ಬಂಡವಾಳವನ್ನು ಕೊಡಿಸಲಾಗಿದೆ. ನಮ್ಮ ದಾರವಾಡದಲ್ಲಿ ೪ ಸಹಕಾರ ಸಂಘಗಳು ನಿರ್ನಾಮವಾಗಿವೆ. ಅನೇಕ ಸಂಘ ಸಂಸ್ಥೆಗಳು ಇವತ್ತು ಕೆಲಸ ನಿರ್ವಹಿಸಲಿಕ್ಕೆ ಅಸಹಾಯಕವಾಗಿವೆ. ಇದರಲ್ಲಿ ೩ ಕೋಟಿ ೩೩ ಲಕ್ಷ ರೂಪಾಯಿ ಸಾರ್ವಜನಿಕರ ಹಣ ಕೂಡಿದೆ. ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.— ಹಣ ವಸೂಲ್ಮಾಡಿದ್ದಾರೆ, ಪೇರು ಕಲೆಕ್ಟ್ ಮಾಡಿದ್ದಾರೆ ಮತ್ತು ಮೆಷಿನರ್‌ಗೆ ಆರ್ಡರ್ ಕೊಟ್ಟಿದ್ದಾರೆ, ಸ್ಟೇಟ್ ಲೆವಲ್ ಆಡ್ವೈಸರಿ ಕಮಿಟಿಯವರು ಮೆಷಿನರಿಗೆ ಆರ್ಡರ್ ಕೊಟ್ಟಿದ್ದಾರೆ ಯಾವ ಸಂಸ್ಥೆಯವರು ದುರುಪಯೋಗ ಮಾಡಿದ್ದಾರೆಂದು ದೂರು ಬಂದಿಲ್ಲ. ಮಾನ್ಯ ಸದಸ್ಯರ ಹತ್ತಿರ ದೂರು ಇದ್ದು ಅದನ್ನು ನನ್ನ ಕಡೆ ಕೊಟ್ಟರೆ ವಿಚಾರಣೆ ಮಾಡಿ ಸಂತ್ತೇನೆಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.— (ಸದಸ್ಯರು ಹಾಜರಿರಲಿಲ್ಲ)

ಸಂಸ್ಥಿ ಬಡ್ತಿಯಿಂದ ವಿನಾಯ್ತಿ.

೧೦೧೫. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕುರಿ ಸಾಕಣೆ ಮತ್ತು ಉಣ್ಣೆ ಉತ್ಪಾದನೆ ಸಹಕಾರಿ ಸಂಘಗಳು, ಸಹಕಾರಿ ಕ್ಷೇತ್ರದಲ್ಲಿ ಬರುತ್ತವೆಯೇ ?

ಆ) ಪ್ರಥಮಿಕ ಸಹಕಾರಿ ಪತ್ತಿನ ಸಂಘಗಳು ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಸುಸ್ತಿ ಬಡ್ಡಿ ವಸೂಲಾತಿಯನ್ನು ಸರಕಾರವು ಮನ್ನಾ ಮಾಡಿರುವುದು ನಿಜವೆ ?

ಇ) ಹಾಗಿದ್ದಲ್ಲಿ, ಇದೇ ರೀತಿಯ ಮನ್ನಾವನ್ನು ಕುರಿ ಸಾಕಣೆ ಹಾಗೂ ಉಣ್ಣೆ ಉತ್ಪಾದನೆಯಲ್ಲಿ ತೊಡಗಿರುವ ಸಹಕಾರಿ ಸಂಘಗಳಿಗೆ ಏಕೆ ವಿಸ್ತರಿಸಲಾಗಲಿಲ್ಲ. ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಹೌದು.

ಆ) ಸಣ್ಣ ಮತ್ತು ಅತೀ ಸಣ್ಣ ರೈತರು, ಪ್ರಾರ್ಥಮಿಕ ವ್ಯವಸಾಯ ಸೇವಾ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಸಹಕಾರಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಂದ ಸಾಲ ಪಡೆದು ಕೊಂಡಿದ್ದು, ೩೧-೩-೧೯೮೪ರ ಒಳಗಾಗಿ ಪೂರ್ತಿ ಸುಸ್ತಿ ಸಾಲ ಮರುಪಾವತಿ ಮಾಡಿದಲ್ಲಿ ಅಂಥ ರೈತರಿಗೆ ಸರಕಾರವು, ಸುತ್ತಿ ಬಡ್ಡಿ ಮನ್ನಾ ಮಾಡಿದೆ.

ಇ) ಆರ್ಥಿಕ ಅಡಚಣೆಗಳು ಮತ್ತು ಇದರಿಂದ ಸಾಮಾನ್ಯ ವಸೂಲಾತಿಯ ಮೇಲೆ ಆಗುವ ಪರಿಣಾಮಗಳಿಗೋಸ್ಕರ, ಸರಕಾರವು ಎಲ್ಲಾ ಸಂಘಗಳಿಂದ ನೀಡಿದ ಸಾಲದ ಮೇಲೆ ಸುಸ್ತಿ ಬಡ್ಡಿ ಮನ್ನಾ ನೀಡಿಲ್ಲ.

ಶ್ರೀ ಎಂ. ಎಸ್. ಪಾಟೀಲ್ (ಶ್ರೀ ಕೆ. ಬಿ. ಕೋಳಿವಾಡ ಅವರ ಪರವಾಗಿ) —ಈ ಪ್ರಶ್ನೆ ಸಾಮಾನ್ಯ ಬಡ ಕುಟುಂಬಕ್ಕೆ ಸಂಬಂಧಪಟ್ಟ ಪ್ರಶ್ನೆ. ಕುರಿ ಸಾಕಣೆ ಮಾಡತಕ್ಕ ಸಮಾಜಕ್ಕೆ ಸಂಬಂಧ ಪಟ್ಟ ಪ್ರಶ್ನೆ. ರೈತರಿಗೆ ಯಾವ ರೀತಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದ್ದೀರಿ ಅದೇ ರೀತಿ ಇವರಿಗೂ ಕೂಡ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ವ್ಯವಸಾಯಗಾರರು ತೆಗೆದುಕೊಂಡಿರುವ ಯಾವ ಸಾಲವನ್ನು ನಾವು ವ್ಯವಸಾಯ ಸಾಲ ಎಂದು ಪರಿಗಣಿಸಿದ್ದೇವೆ ಅದನ್ನು ವಜಾ ಮಾಡಿದ್ದೇವೆ. ಆ ರೀತಿ ಇದನ್ನು ವಜಾ ಮಾಡುವುದಕ್ಕೆ ಹೋದರೆ ೧೫೦ ಕೋಟಿ ರೂಪಾಯಿ ಆಗುತ್ತದೆ. ಆದ್ದರಿಂದ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಇದು ಸಾಧ್ಯವಾಗದ ಪ್ರಶ್ನೆ,

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಶ್ರೀ ಕೆ. ವಸಂತ ಬಂಗೇರ
ಶ್ರೀ ಹೆಚ್. ಸಿ. ಮಹದೇವಪ್ಪ
ಶ್ರೀ ಬಿ. ಎ. ಉಪ್ಪಿನ
ಶ್ರೀ ಶರಣ ಬಸಪ್ಪ
ಶ್ರೀ ಬಂಕರ ಮೂರ್ತಿ
ಶ್ರೀ ಮಲ್ಲಿಕಯ್ಯ ಗುತ್ತೆದಾರ್